KACM010010622021

Presented on : 04-05-2021
Registered on : 04-05-2021
Decided on : --
Duration :

**IN THE COURT OF**
**ADDL DISTRICT AND SESSIONS JUDGE CHIKMAGALUR**
**AT Chikmagalur,CHIKMAGALUR**
**(Presided Over by B PUSHPANJALI)**

**SC/87/2021**

**Exhibit No.**

Complainant(PROSECUTION):

State by Sakharayapatna Police, Rept. by The Public Prosecutor, Chikkamagaluru.

**VERSUS**

Accused:
Sathisha, S/o Late Timmaiah, 33 yrs, Agriculturist, R/o Machagondanahalli Village, Kadur Taluk, CKM
Age: 33
Occupation :
R/o Machagondanahalli Village, S.K. Patna Hobli, Kadur Taluk, CKM

---------------------------------------------------------------------------

APP for State Complainant}: Public Prosecutor,
Advocate for I.S. THEJASVI appearing for Sathisha, S/o Late Timmaiah, 33 yrs, Agriculturist, R/o Machagondanahalli Village, Kadur Taluk, CKM Advocate appearing for , respectively.

---------------------------------------------------------------------------

**Offence punishable under :**
**Sec.302, of INDIAN PENAL CODE,**

## 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಚಿಕ್ಕಮಗಳೂರು

**<u>ಸತ್ರ ಮೊಕದ್ದಮೆ ಸಂಖ್ಯೆಃ 87/2021</u>**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಕಾರ್ತಿಕ್ | **ಪಿ.ಡಬ್ಲ್ಯೂ** | 05 |
| **ತಂದೆಯ ಹೆಸರು** | ಯದುರಾಜ್ | **ಸಿ.ಡಬ್ಲ್ಯೂ** | 09 |
| **ವಯಸ್ಸು** | 26 ವರ್ಷ | | |
| **ಉದ್ಯೋಗ** | ವ್ಯಾಪಾರ | | |
| **ವಾಸಸ್ಥಳ** | ಮಾಚಗೊಂಡನಹಳ್ಳಿ, ಕಡೂರು ತಾಃ | | |

**ದಿಃ 10-11-2022 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>**

1. **ಈಗ ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ತಾಯಿಯ ದೊಡ್ಡಣ್ಣನ ಮಗ. ಮೃತ ತಮ್ಮಯ್ಯ ಗೊತ್ತು. ಚಾಸಾ.1 ರವರು ಮೃತ ತಮ್ಮಯ್ಯರವರ ಮಗಳು ಮತ್ತು ಚಾಸಾ.6 ರವರು ಮೃತರ ಹೆಂಡತಿ. ಚಾಸಾ.10 ನನ್ನ ತಾಯಿಯ ಕಿರಿಯ ಅಣ್ಣ. ನನಗೆ ಚಾಸಾ.2 ರಿಂದ 4, ಚಾಸಾ.7, 8 ರವರು ಗೊತ್ತು. ನನ್ನ ತಾಯಿಗೆ ಒಟ್ಟು 4 ಜನ ಸಹೋದರರು, ಆ ಪೈಕಿ ಮೃತ ತಮ್ಮಯ್ಯರವರು ಒಬ್ಬರು. ಚಾಸಾ.1 ರವರನ್ನು ಜಿ.ಕೊಪ್ಪಲು ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿದ್ದರು. ಚಾಸಾ.1 ರವರ ಗಂಡ ತೀರಿಕೊಂಡ ನಂತರ ಮೃತ ತಮ್ಮಯ್ಯರವರ ಮನೆಯಲ್ಲೇ ವಾಸವಾಗಿರುತ್ತಾರೆ.**

2. **ನಾನು ಡ್ರಿಪ್ ಇರಿಗೇಷನ್ ಕೆಲಸ ಮಾಡಿಸುತ್ತೇನೆ. ನನ್ನ ಕಛೇರಿ ಬಾಣಾವರದಲ್ಲಿದೆ. ನಾನು ಮಾಚಗೊಂಡನಹಳ್ಳಿಯಲ್ಲಿ ವಾಸವಾಗಿದ್ದೇನೆ.**

ಆರೋಪಿಯು ನಿರುದ್ಯೋಗಿ, ಮೃತ ತಮ್ಮಯ್ಯರವರು ಎಲ್ಲಾ ಜವಬ್ಧಾರಿಯನ್ನು ವಹಿಸಿಕೊಂಡಿದ್ದರು. ಮೃತ ತಮ್ಮಯ್ಯರವರು ಸಾಲ ಮಾಡಿ ಆರೋಪಿಗೆ ಟ್ರ್ಯಾಕ್ಟರ್ ಖರೀದಿಸಿ ವ್ಯವಹಾರ ಮಾಡಲು ಕೊಟ್ಟಿದ್ದರು. ಆದರೆ ಆರೋಪಿಯು ಟ್ರ್ಯಾಕ್ಟರ್ ನ್ನು ಉಪಯೋಗಿಸದೇ ಹಾಗೇ ನಿಲ್ಲಿಸಿದ್ದನು.

(ಈ ಹಂತದಲ್ಲಿ ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಓ
ಸಹಿ/-

(ಬಿ.ಪುಷ್ಪಾಂಜಲಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ರೂ.

Visit **ecourts.gov.in** for updates or download mobile app “**eCourts Services**” from Android or iOS